ವಿಶ್ವ ನ್ಯಾಯ ಮಂದಿರ

ರಿದ್ವಾನ್ ೨೦೧೮

ಪ್ರಪಂಚದ ಬಹಾಯಿಗಳಿಗೆ,

ಪ್ರಿಯ ಮಿತ್ರರೇ,

ಆಶೀರ್ವದಿತ ಸೌಂದರ್ಯನ ದ್ವಿಶತಮಾನದ ಜನ್ಮದಿನೋತ್ಸವವನ್ನು ಗುರುತಿಸಿದ ಸ್ಮರಣೀಯ ಘಟನೆಗಳ ಶಾಶ್ವತವಾದ ಹಿನ್ನೆಲೆಯಲಿ ನಾವು ನಿಮ್ಮನ್ನು ಸ್ವಾಗಿಸುತ್ತಿದ್ದೇವೆ. ಆಗ ಮತ್ತು ಈಗ ಏನು ನೆಡದಿದೆ ಎಂದು ನಾವು ಗಮನಿಸಿದರೆ, ಜಾಗತಿಕ ಬಹಾಯಿ ಸಮುದಾಯವು ಪ್ರಸ್ತುತ ಯೋಜನೆಯ, ಮೊದಲ ಆರು ಆವೃತಗಳನ್ನು ಕೈಗೊಂಡಾಗ ಅದಕ್ಕೆ ಇದ್ದ ದೃಷ್ಟಿಯು ಈಗ ಅದೇ ಆಗಿ ಉಳಿದಿಲ್ಲ. ಅದಕ್ಕೆ ಹಿಂದೆಂದಿಗಿಂತಲೂ ತನ್ನ ಗುರಿಯ ಅರಿವು ಬಹಳವಿದೆ. ಸ್ನೇಹಿತರ ಮತ್ತು ಪರಿಚಯಸ್ಥರನ್ನು ತನ್ನ ಸಮುದಾಯ ಜೀವನಕ್ಕೆ ಸಂಪರ್ಕಿಸುವ ಅದರ ಸಾಮರ್ಥ್ಯದಲ್ಲಿ ಅಭೂತಪೂರ್ವ ಉಲ್ಬಣವನ್ನು ಅನುಭವಿಸಿದೆ; ನೆರೆಹೊರೆಯ ಮತ್ತು ಹಳ್ಳಿಗಳ ಏಕೀಕೃತ ಪ್ರಯತ್ನಕ್ಕೆ ಸ್ಪೂರ್ತಿ ನೀಡಲು ಆಧ್ಯಾತ್ಮಿಕ ಸತ್ಯಗಳನ್ನು ನಿರಂತರ ಪ್ರಾಯೋಗಿಕ ಕ್ರಿಯೆಯಲ್ಲಿ ಹೇಗೆ ಅನುವಾದಿಸಬಹುದು ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದು; ಮತ್ತು ಎಲಕ್ಕಿಂತ್ಲೂ ಹೆಚ್ಚಾಗಿ ಜಗತ್ತನ್ನು ಹೊಸದಾಗಿ ನಿರ್ಮಿಸುವ ಬೋಧನೆಗಳ ಬಗ್ಗೆ ಮಾತ್ರವಲ್ಲ, ಆದರೆ ಅದನ್ನು ಬೋಧಿಸಿದವರನ್ನು ಕುರಿತು ಮಾತನಾಡುವುದು: ಬಹಾಉಲ್ಲಾ. ಅವರ ಜೀವನ ಮತ್ತು ಅವರ ನೋವು, ಇವನ್ನು ವಯಸ್ಕರು, ಯುವಕರು ಮತು ಮಕ್ಕಳ ಅಸಂಖ್ಯಾತ ನಾಲಿಗೆಗಳು ತಿಳಿಸಿದ್ದು, ಅನೇಕರ ಹೃದಯಗಳನ್ನು ಮುಟ್ಟಿದವು. ಕೆಲವರು ಅವರ ಧರ್ಮವನ್ನು ಇನ್ನು ಹೆಚ್ಚು ಅನ್ವೇಶಿಸಲು ಸಿಧ್ಧರಿರುವುದನ್ನು ತೋರಿಸಿದರು. ಇತರರು ಅದರ ಜೊತೆ ಕೆಲಸ ಮಾಡಲು ವಾಗ್ದಾನ ಮಾಡಿದರು. ಮತ್ತು ಅನೇಕ ಸ್ವೀಕರಿಸಲು ಸಿದ್ಧವಾದ ಆತ್ಮಗಳು ಬಹಿರಂಗವಾಗಿ ಅನುಮೋದಿಸಿದವು.

ರಾಷ್ಟ್ರೀಯ ಮಟ್ಟದಲ್ಲಿ ಧರ್ಮವು ಮರೆಯಿಂದ ಹೊರಹೊಮ್ಮಿದೆ ಎಂದು ಹಲವಾರು ಸ್ಥಳಗಳು ಪ್ರಗತಿಯ ಸೂಚಕವನ್ನು ಹೇಳುತ್ತವೆ. ವಿಶ್ವಕ್ಕೆ ಬಹಾಉಲ್ಲಾರವರ ದೃಷ್ಟಿಕೋನದ ಅಗತ್ಯವಿದೆ ಮತ್ತು ಬಹಾಯಿಗಳ ಪ್ರಯತ್ನಗಳು ಮೆಚ್ಚುಗೆ ಪಡೆದಿವೆ ಮತ್ತು ಅವನ್ನು ವಿಸ್ತರಿಸಬೇಕು ಎಂದು ಸರ್ಕಾರದ ಮುಖಂಡರು ಮತ್ತು ಚಿಂತನೆಯ ನಾಯಕರು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ ಮತ್ತು ಹಲವು ಸಲ ಖಾಸಗಿಯಾಗಿ ಒತ್ತಿಹೇಳಿದ್ದಾರೆ. ಬಹಾಉಲ್ಲಾರವರನ್ನು ಗೌರವಿಸಿ ಅವರ ಜೀವನವನ್ನು ಆಚರಿಸಲು ಕೇವಲ ಬಹಾಯಿಗಳಷ್ಟೇ ಅಲ್ಲದೆ, ಬಹಾಯಿ ಸಮುದಾಯದ ಹೊರಗಿನವರೂ ಸಹ ವಿಶೇಷ ಕೂಟಗಳುನ್ನು ಏರ್ಪಡಿಸಿದ್ದನ್ನು ಕಂಡು ನಮಗೆ ಸಂತೋಷವಾಯಿತು. ಧರ್ಮಕ್ಕೆ ವಿರೋಧವಿರುವ ಪ್ರದೇಶದಲ್ಲಿರುವ ಸ್ನೇಹಿತರು ನಿರಾಶೆಗೊಳ್ಳಲಿಲ್ಲ; ಅದ್ಭುತ ಸ್ಥಿತಿಸ್ಥಾಪಕತ್ವವನ್ನು ತೋರಿಸುವ ಮೂಲಕ, ಅವರು ತಮ್ಮ ಸಹಯೋಗಿಗಳಿಗೆ ಸತ್ಯವನ್ನು ಸ್ವತಃ ಪರೀಕ್ಷೀಸಲು ಪ್ರೋತ್ಸಾಹಿಸಿದರು ಮತ್ತು ಅನೇಕರು ಈ ಉತ್ಸವಗಳಲ್ಲಿ ಸಂತೋಷದಿಂದ ಭಾಗವಹಿಸಿದರು. ದ್ವಿಶತಮಾನೋತ್ಸವವು ಅಮಿತವಾದ ಕಲಾತ್ಮಕ ಅಭಿವ್ಯಕ್ತಿಯ ವಿಕಸನವನ್ನು ಸಹ ಉಂಟುಮಾಡಿತು, ಅದು ಪ್ರೀತಿಯ ಬುಗ್ಗೆಯು ಎಲ್ಲಿ ಉದ್ಭವಿಸಿತೋ ಅಲ್ಲಿಯ, ಭವ್ಯವಾದ ಪುರಾವೆಯಾಗಿತ್ತು. ಜಾಗತಿಕ ಯೋಜನೆಯ ಪ್ರಸ್ತುತ ಸರಣಿಯ ಪ್ರಾರಂಭದಿಂದ, ಈ ಎರಡು ದಶಕಗಳಿಗಿಂತಲೂ ಹೆಚ್ಚು ಸಮಯದಲ್ಲಿ ಎಷ್ಟು ಕಲಿತೆವು ಎಂಬುದರ ದೃಢೀಕರಣವೇ ಈ ಸಂದರ್ಭಕ್ಕೆ ಬಹಾಯಿ ಸಮುದಾಯದ ಸಂಪೂರ್ಣ ವಿಧಾನದ ಪಾತ್ರವಾಗಿದೆ. ನಂಬಿಕಸ್ತರು ವ್ಯಯುಕ್ತಿವಾಗಿ ಉಪಕ್ರಮಗಳನ್ನು ತೆಗೆದುಕೊಂಡರು, ಸಮುದಾಯವು ಸಾಮೂಹಿಕ ಪ್ರಯತ್ನಕ್ಕೆ ಎದ್ದು ನಿಂತಿತು, ಮತ್ತು ಸ್ನೇಹಿತರು ತಮ್ಮ ಸೃಜನಶೀಲ ಶಕ್ತಿಯನ್ನು ಸಂಸ್ಥೆಗಳಿಂದ ಸಿದ್ಧಪಡಿಸಿದ ಯೋಜನೆಗಳಿಗೆ ಹರಿಯಬಿಟ್ಟರು. ಎರಡು ಶತಮಾನಗಳ ಅಂಗೀಕಾರವನ್ನು ಗುರುತಿಸುವ ಮಹತ್ವದ ವಾರ್ಷಿಕೋತ್ಸವವು, ಮುಂಬರುವ ಶತಮಾನಕ್ಕೆ, ಸಮುದಾಯಗಳನ್ನು ನಿರ್ಮಿಸುವ ಕೆಲಸಕ್ಕೆ ಒಂದು ಶಕ್ತಿಯುತವಾದ ಪ್ರಚೋದನೆಯನ್ನು ನೀಡಿತು. ಎರಡನೇ ದ್ವಿಶತಮಾನವನ್ನು ಮುಟ್ಟುವ ಅವಧಿಯಲ್ಲಿ , ಮೊದಲನೆಯದರಲ್ಲಿ ಪ್ರೀತಿಯಿಂದ ಬಿತ್ತಿದ ಪ್ರತಿಯೊಡು ಬೀಜಗಳನ್ನು ಫಲಬಿಡುವತ್ತ ಸಹನೆಯಿಂದ ಪೋಷಿಸಲಿ.

ಪ್ರಸ್ತುತ ಯೋಜನೆಯ ಎರಡನೆಯ ವರ್ಷದಲ್ಲಿ, ಸಹಜವಾಗಿ ಪ್ರಗತಿಯು ದೇಶದಿಂದ ದೇಶಕ್ಕೆ ಸಮಾನವಾಗಿಲ್ಲವಾದರೂ, ವಿಶ್ವದಲ್ಲಿ ತೀವ್ರಗತಿಯ ಯೋಜನೆಗಳ ಸಂಖ್ಯೆಯು ಪ್ರಸ್ತುತ ಜಾಗತಿಕ ಪ್ರಯತ್ನದ ಐದು ಸಾವಿರ ಸಂಖ್ಯೆಯ ಅರ್ಧವನ್ನು ತಲುಪುತ್ತಿದೆ ಮತ್ತು ಈ ಸಂಖ್ಯೆಯ ಏರಿಕೆಯ ಮಟ್ಟವು ಸ್ಥಿರವಾಗಿ ಹೆಚ್ಚುತ್ತಿದೆ. ಹತ್ತಿರದಿಂದ ನೋಡಿದರೆ, ವ್ಯಕ್ತಿಗಳ, ಸಮುದಾಯಗಳ ಮತ್ತು ಸಂಸ್ಥೆಗಳ ಅಧಿಕಾರಗಳು ಮತ್ತು ಸಾಮರ್ಥ್ಯಗಳು ಹೇಗೆ ವ್ಯಕ್ತಗೊಳ್ಳುತ್ತಿವೆ ಎಂಬುದರ ಭರವಸೆಯ ಚಿಹ್ನೆಗಳಿವೆ. ಎಲ್ಲೆಡೆಯು ನಂಬಿಕಸ್ತರಿಗೆ ದ್ವಿಶತಮಾನದ ಆಚರಣೆಯ ಅನುಭವವು ತಮ್ಮ ಸುತ್ತಲಿನ ಜನರೊಂದಿಗೆ ತಮ್ಮ ದೈನಂದಿನ ಕ್ರಿಯಗಳಲ್ಲಿ ಬೋಧನೆಯ ಉತ್ಸಾಹವು ತುಂಬಿಕೊಳ್ಳಬಹುದು ಎಂಬುದನ್ನು ತೋರಿಸಿಕೊಟ್ಟಿದೆ. ಮತ್ತು ಸಾವಿರಾರು ಹಳ್ಳಿಗಳು ಮತ್ತು ನೆರೆಹೊರೆಯಗಳಲ್ಲಿನ ಕೆಲಸದಲ್ಲಿ ತೀವ್ರತೆಯ ಆವೇಗವು ಒಟ್ಟುಗೂಡಿದಂತೆ, ಒಂದು ರೋಮಾಂಚಕ ಸಮುದಾಯವು ಪ್ರತಿಯೊಂದರಲ್ಲಿಯೂ ಬೇರುಬಿಡುತ್ತಿದೆ. ಈ ಮಾದರಿಯ ಚಟುವಟಿಕೆಯ ವ್ಯವಸ್ಥೆಯನ್ನು ಹೆಚ್ಚು ಹೆಚ್ಚು ಸ್ಥಳಗಳಿಗೆ ವಿಸ್ತರಿಸುತ್ತಿರುವ ಕ್ಲಸ್ಟರ್ನ ಸಂಖ್ಯೆಗಳು ಚೆನ್ನಾಗಿ ಸ್ಥಾಪಿತಗೊಳ್ಳುತ್ತಿವೆ – ಇದರಿಂದ, ಸ್ನೇಹಿತರಿಗೆ ಬೆಳವಣಿಗೆಯ ವಿಕಸನದಲ್ಲಿ ಮೂರನೇ ಮೈಲಿಗಲ್ಲನ್ನು ಹಾದು ಹೋಗಲು ಅನುವಾಗುವುದು – ಇದು ಗುರುತರವಾಗಿ ಬೆಳೆದಿರುವುದು. ಮತ್ತು ಇಲ್ಲಿ, ಬಹಾಯಿ ಕಲಿಕೆಯ ಗಡಿಗಳಲ್ಲಿ, ವಿಶೇಷವಾಗಿ

ಬಹಾಉಲ್ಲಾರವರ ದೃಷ್ಟಿಯತ್ತ ಜನಸಂಖ್ಯೆಯ ಚಾಲನೆ, ಎಲ್ಲಿ ಕೇವಲ ದೊಡ್ಡ ಸಂಖ್ಯೆಯಲ್ಲಿ ವ್ಯಾಪಕವಾದ ಬಹಾಯಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಲ್ಲದೆ ದೊಡ್ಡ ಗುಂಪುಗಳಲ್ಲಿ ಮಹಾನ್ ನಾಮದ ಸಮುದಾಯದ ಜೊತೆಗೆ ತಮ್ಮನ್ನು ತಾವು ಹೇಗೆ ಗುರುತಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಸ್ನೇಹಿತರು ಕಲಿಯುತ್ತಿದ್ದಾರೆ. ಮಕ್ಕಳು ವರ್ಷದಿಂದ ವರ್ಷಕ್ಕೆ ತರಗತಿಗಳಲ್ಲಿ ಅನುಗುಣವಾಗಿ ಚಲಿಸುತ್ತಿರುವ ಮತ್ತು ಕಿಶೋರರ ಆಧ್ಯಾತ್ಮಿಕ ಕಾರ್ಯಕ್ರಮವು ಯಶಸ್ವಿಯಾಗಿ ಒಂದು ಮಟ್ಟದಿಂದ ಮತ್ತೊಂದನ್ನು ಅನುಸರಿಸುತ್ತಿರುವ ಇಂತಹ ಸ್ಥಳಗಳಲ್ಲಿ ಧರ್ಮದ ಶಿಕ್ಷಣದ ಪ್ರಯತ್ನಗಳ ಪಾತ್ರವು ಹೆಚ್ಚು ಔಪಚಾರಿಕವಾಗಿರುತ್ತದೆ. ಈ ಸ್ಥಳಗಳಲ್ಲಿ, ತರಬೇತಿ ಸಂಸ್ಥೆಗಳು ಮಕ್ಕಳ ಮತ್ತು ಕಿಶೋರರ ಆಧ್ಯಾತ್ಮಿಕ ಮತ್ತು ನೈತಿಕ ಬೆಳವಣಿಗೆಗಾಗಿ ನಿರಂತರವಾಗಿ ಹೆಚ್ಚುತ್ತಿರುವ ಸಂಖ್ಯೆಯಲ್ಲಿ ಸಾಕಷ್ಟು ಮಾನವ ಸಂಪನ್ಮೂಲ ಒದಗಿಸುವುದನ್ನು ಕಲಿಯುತ್ತಿದೆ. ಈ ಬುನಾದಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಈ ಜನಸಂಖ್ಯೆಯ ಸಂಸ್ಕೃತಿಯಲ್ಲಿ ಅಂತರ್ಗತವಾಗುತ್ತಿದ್ದು, ಇದು ಸಮುದಾಯ ಜೀವನದ ಅವಿಭಾಜ್ಯ ಅಂಗವಾಗಿ ನೋಡಲಾಗುತ್ತಿದೆ. ತಮ್ಮ ಬೆಳವಣಿಗೆಯ ಜವಾಬ್ದಾರಿಯನ್ನು ತೆಗೆದು ಕೊಂಡ ಜನರಲ್ಲಿ ಒಂದು ಹೊಸ ಜೀವಕಳೆಯು ಹೊರಹೊಮ್ಮುವುದು, ಮತ್ತು ಅವರು ನಿರಾಸಕ್ತಿಯನ್ನು ಉತ್ಪಾದಿಸುವ ಸಾಮಾಜಿಕ ಶಕ್ತಿಗಳಿಗೆ ಪ್ರತಿರಕ್ಷೆಯನ್ನು ನಿರ್ಮಿಸುತ್ತಾರೆ. ಭೌತಿಕ ಮತ್ತು ಆಧ್ಯಾತ್ಮಿಕ ಪ್ರಗತಿಯ ಸಾಧ್ಯತೆಗಳು ರೂಪುಗೊಳ್ಳುತ್ತವೆ. ಸಾಮಾಜಿಕ ವಾಸ್ತವತೆಯು ರೂಪಾಂತರಗೊಳ್ಳಲು ಆರಂಭವಾಗುತ್ತದೆ.

ಒಲವಿನ ಸ್ನೇಹಿತರೇ, ನಿಜವಾಗಿಯೂ, ಅತ್ಯಂತ ಪ್ರಿಯನಿಗೆ ಧನ್ಯತೆಯನ್ನು ಅರ್ಪಿಸುವ ಕ್ಷಣವಿದು. ಪ್ರೋತ್ಸಾಹಿಸಲು ಅನೇಕ ಮುಖ್ಯವಾದ ಕಾರಣಗಳಿವೆ. ಇನ್ನೂ ಉಳಿದಿರುವ ಕೆಲಸದ ಪ್ರಮಾಣದ ಬಗ್ಗೆ ನಮ್ಮ ಅರಿವು ಬಹಳವಿದೆ. ಮೂಲವಾಗಿ, ನಾವು ಈ ಹಿಂದೆಯೇ ಸೂಚಿಸಿದಂತೆ, ಹಲವು ನೂರಾರು ಕ್ಲಸ್ಟರ್ಗಳಲ್ಲಿ, ತಮ್ಮ ಸುತ್ತಲಿರುವವರ ಜೊತೆ ಬೆಳವಣಿಗೆಯನ್ನು ಪೋಷಿಸುವ ಮತ್ತು ಸಾಮರ್ಥ್ಯವನ್ನು ನಿರ್ಮಿಸುವ ಮತ್ತು ಯಾರು ತಮ್ಮ ಸಾಮರ್ಥ್ಯ ಮತ್ತು ಶಿಸ್ತಿನಿಂದ ಚಟುವಟಿಕೆಗಳ ಬಗ್ಗೆ ಪ್ರತಿಫಲನೆ ಮಾಡುವ ಹಾಗು ಅನುಭವದಿಂದ ಕಲಿಯುವ ನಿರಂತರ ಗಮನವನ್ನು ಕಾಪಾಡಿಕೊಂಡು ಹೋಗುವಂತಹ, ನಂಬಿಕಸ್ತರ ಒಂದು ಬೆಳೆಯುವ ತಂಡವು ಹೊರಹೊಮ್ಮಬೇಕು. ಪ್ರತಿಯೊಂದು ಸ್ಥಳದಲ್ಲೂ, ಕೇವಲ ಕ್ಲಸ್ಟರ್ನ ಮಟ್ಟದಲ್ಲಷ್ಟೇ ಅಲ್ಲ ನೆರೆಹೊರೆಯಗಳಿಗೂ ಹಾಗೂ ಹಳ್ಳಿಗಳ ಮಟ್ಟದಲ್ಲೂ ಸಹ ವ್ಯಕ್ತಿಗಳ ವಿಸ್ತರಿಸುವ ಬೀಜಕಣೆಯನ್ನು ಬೆಳೆಸುವುದು ಮತ್ತು ಅವರೊಟ್ಟಿಗೆ ಸೇರಿ ಕೆಲಸ ಮಾಡುವುದು ಒಮ್ಮೆಲೇ ಒಂದು ಅಸಾಧಾರಣ ಸವಾಲು ಹಾಗು ಒಂದು ನಿರ್ಣಾಯಕ ಅಗತ್ಯವಾಗಿದೆ. ಆದರೆ ಇದು ಎಲ್ಲಿ ನೆಡೆಯುತ್ತಿದೆಯೋ ಅಲ್ಲಿ ಫಲಿತಾಂಶಗಳೇ ಮಾತನಾಡುವವು.

ಧರ್ಮದ ಸಂಸ್ಥೆಗಳು ಆ ಅತ್ಯುತ್ಕೃಷ್ಟ ಅಗತ್ಯವನ್ನು ತಮ್ಮ ಚಿಂತನೆಯ ಮುಂಚೂಣಿಯಲ್ಲಿಟ್ಟುಕೊಂಡು, ಪ್ರಗತಿಯಿಂದ ಉದ್ಭವವಾಗುವ ಒಳನೋಟಗಳನ್ನು ವ್ಯಾಪಕವಾಗಿ ಅನ್ವಯಿಸುವಂತೆ, ಪರಿಣಾಮಕಾರಿಯಾದ ಕಾರ್ಯವಿಧಾನಗಳನ್ನು ರೂಪಿಸುತ್ತಿದೆ ಎಂದು ನಮಗೆ ಭರವಸೆ ಇದೆ. ಅದೇ ಸಮಯದಲ್ಲಿ ರಾಷ್ಟ್ರೀಯ, ಪ್ರಾದೇಶಿಕ ಮತ್ತು ಸ್ಥಳೀಯ ಸಂಸ್ಥೆಗಳ, ಮಹತ್ತರವಾದ ಅನುಭವವು ವಿಶಾಲವಾದ ದೃಷ್ಟಿಯನ್ನು ನೀಡುತ್ತಿದೆ. ಅವರು ಸಮುದಾಯದ ಬೆಳವಣಿಗೆಯ ಎಲ್ಲಾ ಅಂಶಗಳಲ್ಲಿ ಭಾಗಿಯಾಗುತ್ತಿದ್ದಾರೆ ಮತ್ತು ಔಪಾಚಾರಿಕವಾದ ಸದಸ್ಯತ್ವವನ್ನು ಮೀರಿ ಜನರ ಯೋಗಕ್ಷೇಮದತ್ತ ಕಾಳಜಿವಹಿಸುತ್ತಿದ್ದಾರೆ. ಜನರ ಪ್ರಗತಿಗಾಗಿ ಸಂಸ್ಥೆಯ ಪ್ರಕ್ರಿಯೆಯ ಅಗಾಧವಾದ ಫಲಿತಾಂಶದ ಅರಿವಿನಿಂದ , ಅವರು ತರಬೇತಿ ಸಂಸ್ಥೆಯನ್ನು ಹೇಗೆ ಬಲಗೊಳಿಸಬೇಕು ಎಂಬುದರತ್ತ ಗಮನ ಹರಿಸುತ್ತಿದ್ದಾರೆ. ಯೋಜನೆಯ ಅವಶ್ಯಕತೆಗಳತ್ತ ಸಮುದಾಯದ ಗಮನವನ್ನು ಕಾಪಾಡಿಕೊಂಡು ಬರಬೇಕು ಎಂಬ ಅರಿವಿನಿಂದ ಅವರು ಇದ್ದಾರೆ ಮತ್ತು ನಿರಂತರವಾಗಿ ಹಿಗ್ಗುತ್ತಿರುವ ಸ್ನೇಹಿತರ ಗೋಳವನ್ನು ಉನ್ನತ ಮಟ್ಟದ ಐಕ್ಯತೆಯತ್ತ ಕರೆ ನೀಡುತ್ತಿದ್ದಾರೆ. ತಮ್ಮ ಆಡಳಿತ ಮತ್ತು ಆರ್ಥಿಕ ವ್ಯವಸ್ಥೆಯನ್ನು ಸಂಸ್ಕರಿಸಲು ಅವರು ತಮ್ಮ ಜವಾಬ್ದಾರಿಯನ್ನು ವಿಶ್ವಾಸಯುಕ್ತವಾಗಿ ಎತ್ತಿಹಿಡಿಯುತ್ತಿದ್ದಾರೆ, ಇದರಿಂದಾಗಿ ವಿಸ್ತರಣೆ ಮತ್ತು ದೃಢೀಕರಣದ ಕೆಲಸಗಳು ಸರಿಯಾಗಿ ನಡೆಯುತ್ತಿವೆ. ಇವೆಲ್ಲದರಲ್ಲಿ , ಅವರು ಅಂತಿಮವಾಗಿ ಸಮುದಾಯದಲ್ಲಿ ಶಕ್ತಿಯುತವಾದ ಆಧ್ಯಾತ್ಮಿಕ ಶಕ್ತಿಗಳನ್ನು ಹರಿಯಬಿಡುವ ಆ ಸ್ಥಿತಿಯನ್ನು ಬೆಳೆಸುವುದರಲ್ಲಿ ಮಗ್ನರಾಗಿದ್ದಾರೆ.

ಸಮುದಾಯ ನಿರ್ಮಾಣ ಕಾರ್ಯವು ತೀವ್ರಗೊಳ್ಳುತ್ತಿದ್ದಂತೆ, ಸ್ನೇಹಿತರು ತಮ್ಮ ಸುತ್ತಲಿನ ಸಮಾಜದ ಸ್ಥಿತಿಯನ್ನು ಸುಧಾರಿಸಲು ತಾವು ಬೆಳೆಸಿಕೊಂಡಂತಹ ಹೊಸ ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ದಿವ್ಯ ಬೋಧನೆಗಳ ಅಧ್ಯಯನದಲ್ಲಿ ಅವರ ಉತ್ಸಾಹವು ಹೊತ್ತಿಸಲ್ಪಟ್ಟಿದೆ. ಚಿಕ್ಕ ಅವಧಿಯ ಯೋಜನೆಗಳ ಸಂಖ್ಯೆಯು ಹೆಚ್ಚಾಗುತ್ತಿವೆ, ಔಪಚಾರಿಕ ಕಾರ್ಯಕ್ರಮಗಳು ತಮ್ಮ ಗಡಿಯನ್ನು ವಿಸ್ತರಿಸಿವೆ, ಮತ್ತು ಈಗ ಶಿಕ್ಷಣ , ಆರೋಗ್ಯ , ಕೃಷಿ ಮತ್ತು ಇತರ ಕ್ಷೇತ್ರಗಳ ಬೆಳವಣಿಗೆಯಲ್ಲಿ ತೊಡಗಿರುವ ಬಹಾಯಿ ಪ್ರೇರೇಪಿತ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ವ್ಯಕ್ತಿಯ ಹಾಗು ಸಾಮೂಹಿಕ ಜನರ ಜೀವನದಲ್ಲಿ ಗೋಚರಿಸುವ ಪರಿವರ್ತನೆಯಿಂದಾಗಿ, ಬಹಾಉಲ್ಲಾರವರ ಧರ್ಮದ ಸಮಾಜ ನಿರ್ಮಾಣ ಶಕ್ತಿಯ, ಸ್ಪಷ್ಟವಾದ ಪ್ರವೃತ್ತಿಯನ್ನು ಗ್ರಹಿಸಬಹುದು. ಸರಳ ಅಥವ ಸಂಕೀರ್ಣವಾದ, ನಿಶ್ಚಿತ ಅವಧಿಯ ಅಥವ ಸುದೀರ್ಘವಾದ ಅಥವ ಧೀರ್ಘ ಕಾಲದಿಂದ ಅಸ್ತಿತ್ವದಿಂದಿರುವ ಈ ತರಹದ ಸಾಮಾಜಿಕ ಚಟುವಟಿಕೆಗಳಿಂದಾಗಿ, ಬಹಾಯಿ ಅಂತರ್ರಾಷ್ಟ್ರೀಯ ಸಮುದಾಯದ ಕಛೇರಿಗಳು , ಪ್ರಚಲಿತ ಪ್ರವಚನಗಳಲ್ಲಿ ಪಾಲ್ಗೊಳ್ಳುವ ತಮ್ಮ ಪ್ರಯತ್ನಗಳಲ್ಲಿ ಹೆಚ್ಚು ಹೆಚ್ಚು ಸ್ಫೂರ್ತಿ ಪಡೆಯುತ್ತಿರುವುದು ಆಶ್ಚರ್ಯವೇನಲ್ಲ. ಇಷ್ಟು ಮುಂದುವರೆದಿರುವ ಈ ಧರ್ಮಕ್ಕೆ ಇದು ಮತ್ತೊಂದು ಪ್ರಮುಖ ಕ್ಷೇತ್ರದ ಪ್ರಯತ್ನ. ಸ್ತ್ರೀ ಪುರುಷರ ಸಮಾನತೆ, ವಲಸೆ ಮತ್ತು ಏಕೀಕರಣ, ಸಾಮಾಜಿಕ

ಪರಿವರ್ತನೆಯಲ್ಲಿ ಯುವ ಜನರ ಪಾತ್ರ, ಧಾರ್ಮಿಕ ಸಹ ಬಾಳ್ವೆ ಮುಂತಾದವುಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸಮಾಜಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು, ಬೆಳೆಯುತ್ತಿರುವ ಆತ್ಮವಿಶ್ವಾಸ, ಪ್ರಾವಿಣ್ಯತೆ ಮತ್ತು ಅಂತರ್ದೃಷ್ಟಿಯಿಂದ ನೀಡಲಾಗುತ್ತಿದೆ. ಎಲ್ಲಾ ವಯಸ್ಸಿನ ಮತ್ತು ಹಿನ್ನೆಲೆಯ ನಂಬಿಕಸ್ತರು, ಅವರು ಎಲ್ಲೇ ವಾಸಿಸುತ್ತಿರಲಿ, ಕೆಲಸ ಮಾಡುತ್ತಿರಲಿ ಅಥವ ಅಧ್ಯಯನ ಮಾಡುತ್ತಿರಲಿ, ಆವರು ನಿರ್ಧಿಷ್ಟ ಪ್ರವಚನಗಳಿಗೆ ಮೌಲ್ಯಯುತ ಕೊಡುಗೆಗಳನ್ನು ನೀಡಿ, ಅವರ ಸುತ್ತಮುತ್ತಲಿನವರ ಗಮನಕ್ಕೆ ಬಹಾಉಲ್ಲಾರವರ ವಿಶಾಲವಾದ ದರ್ಶನವು ರೂಪಿಸಿದ ನೈತಿಕ ತತ್ವವುಳ್ಳ ದೃಷ್ಟಿಕೋನವನ್ನು ತರುತ್ತಿದ್ದಾರೆ.

ಧರ್ಮದ ನಿಲುವು ,ಉಪನ್ಯಾಸಗಳು ತೆರೆದುಕೊಳ್ಳುವ ಹಲವಾರು ಜಾಗಗಳಲ್ಲಿ, ವರ್ಲ್ಡ್ ವೈಡ್ ವೆಬ್‌ನ ತನ್ನ ಅಧಿಕೃತ ಉಪಸ್ಥಿತಿಯಿಂದಾಗಿ ವರ್ಧಿಸಲ್ಪಟ್ಟಿದೆ, ಇದು ಹಲವಾರು ರಾಷ್ಟ್ರೀಯ ಬಹಾಯಿ ವೆಬ್ಸೈಟ್ಗಳ ಪ್ರಾರಂಭದ ಮೂಲಕ ಗಣನೀಯವಾಗಿ ವಿಸ್ತರಿಸಿದೆ ಮತ್ತು bahai.org ನೊಂದಿದೆ ಸಂಬಂಧಿಸಿದ ಇನ್ನಿತರ ಸೈಟ್ ಗಳ ಅಭಿವೃಧ್ಧಿ ಮತ್ತಷ್ಟು ವಿಸ್ತರಿಸಿದೆ. ಧರ್ಮ ಪ್ರಸಾರ ಮತ್ತು ರಕ್ಷಣೆ, ಇವೆರಡಕ್ಕೂ ಅದು ಅಪಾರವದ ಮೌಲ್ಯವನ್ನು ಹೊಂದಿದೆ. ಕೇವಲ ಕೆಲವೇ ದಿನಗಳಲ್ಲಿ, ಒಂದು ದೊಡ್ಡ ಜಾಗತಿಕ ಪ್ರೇಕ್ಷಕರನ್ನು ಬೈಸೆಂಟನರಿ ವೆಬ್ಸೈಟ್ನಲ್ಲಿ ಪ್ರಸ್ತುತಪಡಿಸಿದ ಮತ್ತು ಏಕ ಕಾಲದಲ್ಲಿ ಒಂಬತ್ತು ಭಾಷೆಗಳಲ್ಲಿ ನವೀಕರಿಸಲಾದ, ಜಾಗರೂಕತೆಯಿಂದ ಧರ್ಮವನ್ನು ಕುರಿತು ತಯಾರಿಸಿದ ವಿಷಯಕ್ಕೆ ಆಕರ್ಷಿಸಲ್ಪಟ್ಟಿತ್ತು, ಮತ್ತು ಅದು ಈಗಾಗಲೇ ಸಂಭವಿಸಿರುವ ಆಚರಣೆಯ ವೈವಿಧ್ಯತೆಯನ್ನು ವಿವರಿಸುವ ವೈಯುಕ್ತಿಕ ದೇಶಗಳ ಪುಟಗಳಲ್ಲಿ ಈಗ ಸಿದ್ಧಪಡಿಸಲಾಗಿದೆ. ಬಹಾಯಿ ರೆಫರೆನ್ಸ್ ಲೈಬ್ರರಿ ಸೈಟ್ಗೆ ಪರಿಚಯಿಸುವುದಕ್ಕಾಗಿ ಯೋಜನೆಗಳು ಈಗಾಗಲೇ ಅತ್ಯಾಧುನಿಕವಾಗಿದ್ದು, ಹಿಂದೆ ಭಾಷಾಂತರ ಮಾಡದ ಮತ್ತು ಅಪ್ರಕಟಿತ ಹಾದಿ ಅಥವ ಪವಿತ್ರ ಬರಹಗಳ ಶಾಸನಗಳನ್ನು ಕಾಲಾಂತರದಲ್ಲಿ ಆನ್ಲೈನ್ನಲ್ಲಿ ಬಿಡುಗಡೆ ಮಾಡಲು ಅನುಮತಿಸುತ್ತವೆ. ಇದಲ್ಲದೆ, ಬಹಾಉಲ್ಲಾ ರವರ ಹೊಸ ಸಂಪುಟಗಳು ಮತ್ತು ಆಂಗ್ಲ ಭಾಷೆಗೆ ಸಲ್ಲಿಸಲ್ಪಟ್ಟ ಅಬ್ದುಲ್ ಬಹಾರವರ ಬರಹಗಳು, ಸಹ ಮುಂಬರುವ ವರ್ಷಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಚಿಲಿಯಲ್ಲಿರುವ ಸ್ಯಾಂಟಿಯಾಗೋ, ಮತ್ತು ಕಾಂಬೋಡಿಯಾದ ಬತಮ್ ಬಂಗ್ ನಲ್ಲಿ ತೀರಾ ಇತ್ತೀಚಿಗೆ ಆರಾಧನಾ ಮಂದಿರಗಳು ಆಕರ್ಷಣೆಯ ಕೇಂದ್ರಗಳಾಗಿ ಸ್ಥಾಪಿತಗೊಂಡಿದ್ದು, ಧರ್ಮದ ಸಂಕೇತವಾಗಿ ತಮ್ಮ ಸಮಾಜಗಳಿಗೆ ಕರೆಯಿತ್ತಿವೆ. ಮತ್ತು ಅದರ ಸಂಖ್ಯೆಯು ಇನ್ನೂ ಬೆಳೆಯುವುದರಲ್ಲಿದೆ. ಕೊಲಂಬಿಯಾದ ನೋರ್ಟೆ ಡೆಲ್ ಕೌಕಾದಲ್ಲಿನ ಆರಾಧನಾ ಮಂದಿರದ ಸಮರ್ಪಣೆ ಸಮಾರಂಭವು ಜುಲೈನಲ್ಲಿ ನಡೆಯಲಿದೆ. ಇದಲ್ಲದೆ, ಹೆಚ್ಚಿನ ಆರಾಧನಾ ಮಂದಿರಗಳ ನಿರ್ಮಾಣವು ಬಹಳ ಹತ್ತಿರದಲ್ಲಿದೆ. ವನುವತು ನಲ್ಲಿ ಕಟ್ಟಡವನ್ನು ಪ್ರಾರಂಭಿಸಲು ಅನುಮತಿಯನ್ನು ಪಡೆಯಲಾಗಿದೆ. ಭಾರತದಲ್ಲಿ ಮತ್ತು ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ, ಅತ್ಯಂತ ಸಂಕೀರ್ಣವಾದ ಮತ್ತು ನಿಖರವಾದ ಪ್ರಕ್ರಿಯೆಯು ಅಂತಿಮವಾಗಿ ಜಾಗದ ಯಶಸ್ವಿ ಸ್ವಾಧೀನಕ್ಕೆ ಕಾರಣವಾಗಿದೆ. ಪಪುವ ನ್ಯೂ ಗಿನಿಯಾದಲ್ಲಿ ಮೊದಲ ರಾಷ್ಟ್ರೀಯ ಆರಾಧನಾ ಮಂದಿರದ ವಿನ್ಯಾಸವನ್ನು ಹೊಸ ವರ್ಷದ ದಿನದಂದು ಅನಾವರಣಗೊಳಿಸಿದಾಗ ಆದ ಸಂತೋಷವು ಇನ್ನೂ ಕಡಿಮೆಯಾಗುವ ಮುನ್ನವೇ ಸ್ಥಳೀಯ ಆರಾಧನಾ ಮಂದಿರದ ವಿನ್ಯಾಸವನ್ನು ಪ್ರಕಟಿಸಲಾಯಿತು. ಏತನ್ಮಧ್ಯೆ, ಸಂಶೋಧನಾ ಇಲಾಖೆಯು , ಇತ್ತೀಚಿಗೆ ಆರಾಧನಾ ಮಂದಿರ ಸಂಸ್ಥೆಯ ಬಗ್ಗೆ ಬಿಡುಗಡೆ ಮಾಡಿದ ಹೇಳಿಕೆ ಮತ್ತು ಸಂಕಲನವು, ಸಮುದಾಯ ಜೀವನದಲ್ಲಿ ಪೂಜೆಯ ಪ್ರಾಮುಖ್ಯತೆಯ ಬಗ್ಗೆ ಸ್ನೇಹಿತರ ಮೆಚ್ಚುಗೆಗೆ ಇನ್ನೂ ಹೆಚ್ಚು ಉತ್ತೇಜನ ನೀಡುವುದೆಂದು ನಮಗೆ ನಿರೀಕ್ಷೆಯಿದೆ. ತಮ್ಮ ಸೇವೆಯ ಕಾರ್ಯಗಳಲ್ಲಿ, ವಿಶೇಷವಾಗಿ ತಮ್ಮ ನಿಯಮಿತ ಭಕ್ತ್ಯಾತ್ಮಕ ಕೂಟಗಳು ಭವಿಷ್ಯದ ಆರಾಧನಾ ಮಂದಿರಗಳಿಗೆ , ಆಧ್ಯಾತ್ಮಿಕ ಬುನಾದಿಯನ್ನು ಹಾಕುತ್ತಿವೆ.

ಒಂದೇ ಒಂದು ಗುರಿಯ ಮೇಲೆ ಕೇಂದ್ರೀಕರಿಸಿದ ೧೯೬೪ರಲ್ಲಿ ಪ್ರಾರಂಭವಾದ ಕಾಲು ಶತಮಾನದ ಪ್ರಯತ್ನದಿಂದ ಕೇವಲ ಮೂರು ವರ್ಷಗಳು ಉಳಿದಿವೆ: ದಂಡು ಪ್ರವೇಶದ ಪ್ರಕ್ರಿಯೆಯಲ್ಲಿ ಗಮನಾರ್ಹ ಮುನ್ನಡೆ. ರಿದ್ವಾನ್ ೨೦೨೧ರಲ್ಲಿ ಬಹಾಉಲ್ಲಾರ ಅನುಯಾಯಿಗಳು ಒಂದೇ ಒಂದು ವರ್ಷದ ಯೋಜನೆಯನ್ನು ಕೈಗೊಳ್ಳುತ್ತಾರೆ. ಸಂಕ್ಷಿಪ್ತವಾಗಿ , ಆದರೆ ಅರ್ಥಗರ್ಭಿತವಾದ ಶಕುನದ ಈ ಒಂದು ವರ್ಷದ ಪ್ರಯತ್ನವು ಧರ್ಮ ಲಾಂಚನವನ್ನು ಹೊತ್ತು ಬಹಾಯಿ ಯುಗದ ಮೂರನೆಯ ಶತಮಾನಕ್ಕೆ ಕಾಲಿಟ್ಟು , ಒಂದು ಹೊಸ ಯೋಜನೆಗಳ ಅಲೆಯನ್ನು ಪ್ರಾರಂಭಿಸುತ್ತದೆ. ಈ ಮಂಗಳಕರ ಹನ್ನೆರಡು ತಿಂಗಳ ಅವಧಿಯಲ್ಲಿ, ಬಹಾಯಿ ಪ್ರಪಂಚದಲ್ಲಿ ಅಬ್ದುಲ್ ಬಹಾರವರ ಆರೋಹಣದ ಶತಮಾನದ ಸ್ಮರಣಾರ್ಥವು, ಬಹಾಯಿ ವಿಶ್ವ ಕೇಂದ್ರದಲ್ಲಿ ವಿಶೇಷ ಸಭೆಯನ್ನು ಒಳಗೊಂಡಿದ್ದು, ಅದಕ್ಕೆ ಪ್ರತಿಯೊಂದು ರಾಷ್ಟ್ರೀಯ ಆಧ್ಯಾತ್ಮಿಕ ಸಭೆ ಹಾಗು ಪ್ರಾದೇಶಿಕ ಬಹಾಯಿ ಮಂಡಳಿಯ ಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಆದಾಗ್ಯೂ, ಇದು ಮುಂದಿನ ಕೆಲವು ದಶಕಗಳ ಬೇಡಿಕೆಗಳಿಗಾಗಿ ಭಕ್ತರನ್ನು ಸಿದ್ಧಪಡಿಸುವ ಘಟನೆಗಳ ಸರಣಿಯಲ್ಲಿ ಮೊದಲನೆಯದು. ಮುಂದಿನ ಜನವರಿಯಲ್ಲಿ , ಗುರುಗಳ ಇಚ್ಛೆ ಮತ್ತು ಮರಣಶಾಸನದ ಮೊದಲ ಓದುವಿಕೆಯ ಒಂದು ನೂರುವರ್ಷಗಳು ಕಳೆದ ಈ ಸಂದರ್ಭದಲ್ಲಿ , ಕಾನ್ಟಿನೆಂಟಲ್ ಮಂಡಳಿಯ ಸಲಹದಾರರು ಮತ್ತು ರಕ್ಷಣೆ ಹಾಗು ಪ್ರಸರಣಕ್ಕಾಗಿ ಇರುವ ಎಲ್ಲಾ ಆಕ್ಸಿಲರಿ ಬೋರ್ಡ್ನ ಸದಸ್ಯರನ್ನು ಒಟ್ಟಾಗಿ ತರುವ ಒಂದು ಸಮಾವೇಶವು ಪವಿತ್ರ ಭೂಮಿಯಲ್ಲಿ ಇರುತ್ತದೆ. ಈ ಎರಡು ಐತಿಹಾಸಿಕ ಕೂಟಗಳಲ್ಲಿ ಬಿಡುಗಡೆಯಾದ ಆಧ್ಯಾತ್ಮಿಕ ಶಕ್ತಿಯು, ಅವರು ವಾಸಿಸುವ ಪ್ರತಿಯೊಂದು ಭೂಮಿಗೂ ದೇವರ ಎಲ್ಲಾ ಸ್ನೇಹಿತರಿಗೆ ಸಾಗಿಸಲ್ಪಡಬೇಕು. ಈ ಉದ್ದೇಶಕ್ಕಾಗಿ, ಮುಂಬರುವ ತಿಂಗಳುಗಳಲ್ಲಿ, ಸಮಾವೇಶಗಳ ಸರಣಿಯನ್ನೇ , ಬಹು-ವರ್ಷದ ಪ್ರಯತ್ನಕ್ಕೆ ಒಂದು ವೇಗವರ್ಧಕವಾಗಿ ಪ್ರಪಂಚದಾದ್ಯಂತ ಆಯೋಜಿಸಲಾಗುತ್ತದೆ, ಇದು ಬರುವ ಒಂದು ವರ್ಷದ ಯೋಜನೆಯನ್ನು ಅನುಸರಿಸುತ್ತದೆ.

ಹೀಗಾಗಿ ಗುರುಗಳ ದಿವ್ಯ ಯೋಜನೆಯ ತೆರೆಯುವಿಕೆಯ ಒಂದು ಹೊಸ ಹಂತವು ಸಮೀಪಿಸುತ್ತಿದೆ. ಆದರೆ ಹೆಚ್ಚು ತಕ್ಷಣದ ನಿರೀಕ್ಷೆಯು ನೇರವಾಗಿ ಮುಂದಿದೆ. ಬಾಬ್ ರವರ ಜನ್ಮದ ದ್ವಿಶತಮಾನೋತ್ಸವವು ಕೇವಲ ಒಂದೂವರೆ ವರ್ಷವಷ್ಟೇ ದೂರವಿದೆ. ಇದು ನಮ್ಮ ಧರ್ಮದ ಹುತಾತ್ಮ-ಹರಿಕಾರರ ಅಸಾಮಾನ್ಯ ವೀರತ್ವವನ್ನು ಸ್ಮರಿಸಿಕೊಳ್ಳುವ ಒಂದು ಅವಧಿಯಾಗಿದ್ದು , ಯಾರ ಗಮನಾರ್ಹವಾದ ಆಡಳಿತವು ಮಾನವೀಯತೆಯನ್ನು ಹೊಸ ಇತಿಹಾಸದ ಅವಧಿಗೆ ತಳ್ಳಿರುವುದಾಗಿದೆ. ನಮ್ಮ ಸಮಯವು, ಬಾಬ್ ರವರು ಕಾಣಿಸಿಕೊಂಡ ಸಮಯಕ್ಕಿಂತಲೂ, ಎರಡು ಶತಮಾನಗಳಿಂದ ಬೇರ್ಪಟ್ಟರೂ, ಇಂದಿನ ಪ್ರಪಂಚದಲ್ಲಿ , ದಬ್ಬಾಳಿಕೆ ಮತ್ತು ತಿಳಿದುಕೊಳ್ಳಬೇಕೆನ್ನುವ ಆತ್ಮದ ಬಾಯಾರಿಕೆಗೆ ಉತ್ತರವನ್ನು ಕಂಡುಕೊಳ್ಳಬೇಕೆನ್ನುವ ಅನೇಕ ಜನರಿರುವುದರಲ್ಲಿ ಅದೇ ಹೋಲಿಕೆ ಕಂಡುಬಂದಿದೆ. ಈ ಎರಡು ನೂರು ವರ್ಷದ ವಾರ್ಷಿಕೋತ್ಸವವನ್ನು ಸರಿಯಾಗಿ ಗುರುತಿಸಬಹುದೆಂದು ಪರಿಗಣಿಸಿ, ಉತ್ಸವಗಳು ತಮ್ಮದೇ ಆದ ವಿಶೇಷ ಪಾತ್ರವನ್ನು ಹೊಂದಿವೆ ಎಂದು ನಾವು ಗುರುತಿಸುತ್ತೇವೆ. ಅದೇನೆ ಇದ್ದರೂ, ಈಗಷ್ಟೇ ಕಳೆದ ದ್ವಿಶತಮಾನೋತ್ಸವಕ್ಕಿಂತಲೂ ಕಡಿಮೆ ಸಮೃದ್ಧವಾದ ಅಥವ ಕಡಿಮೆಗೆ ಒಳಗೊಳ್ಳದ ವಿಜೃಂಭಣೆಯ ಚಟುವಟಿಕೆಯನ್ನು ನಾವು ನಿರೀಕ್ಷಿಸುತ್ತೇವೆ. ಪ್ರತಿ ಸಮುದಾಯ, ಪ್ರತಿ ಕುಟುಂಬ, ಪ್ರತಿಯೊಂದು ಹೃದಯವು ನಿಸ್ಸಂದೇಶವಾಗಿ ನಿರೀಕ್ಷೆಯೊಂದಿಗೆ ಎದುರುನೋಡುವ ಒಂದು ಸಂದರ್ಭವಿದು. ಮಂಬರುವ ತಿಂಗಳುಗಳು ಬಾಬ್ ರವರ ನಿರ್ಭೀತ ಅನುಯಾಯಿಗಳು, ನಾಯಕಿಯರು ಮತ್ತು ನಾಯಕರ ವೀರ ಜೀವನವನ್ನು ಸ್ಮರಿಸುವ ಕಾಲವಾಗಿರುವುದು, ಯಾರ ನಂಬಿಕೆಯು , ಸಾಟಿಯಿಲ್ಲದ ತ್ಯಾಗದ ಚಟುವಟಿಕೆಗಳಲ್ಲಿ ವ್ಯಕ್ತಪಟ್ಟಿದ್ದು, ವರ್ಷ ನಂತರ ವರ್ಷದ ಘಟನೆಗಳ ದಾಖಲೆಯು ಧರ್ಮವನ್ನು ಶಾಶ್ವತವಾಗಿ ಅಲಂಕರಿಸಿರುವುದು. ಅವರ ಗುಣಗಳಾದ ನಿರ್ಭಯತೆ, ಅರ್ಪಣೆ ಮತ್ತು ದೇವರನ್ನು ಬಿಟ್ಟು ಎಲದರಿಂದಲೂ ಪರಿತ್ಯಕ್ತತೆ, ಇದು ಅವರ ಸಾಹಸಗಳನ್ನು ತಿಳಿದುಕೊಳ್ಳುವ ಪ್ರತಿಯೊಬ್ಬರ ಮೇಲೂ ಪ್ರಭಾವ ಬೀರುತ್ತದೆ. ಎಳೆ ವಯಸ್ಸಿನ ಅದೆಷ್ಟೋ ಕೆಚ್ಚೆದೆಯವರು ಇತಿಹಾಸವು ಅಳಿಸಲಾಗದ ಗುರುತನ್ನು ಮಾಡಿರುವುದು ಎಷ್ಟು ಗಮನಾರ್ಹವಾದುದು. ಮುಂಬರುವ ಅವಧಿಯಲ್ಲಿ, ಅವರ ಉದಾಹರಣೆಯು ವಿಶ್ವಾಸರ್ಹರಾಗಿರುವ ಸಂಪೂರ್ಣ ಸಂಗಡಿಗರ ಗುಂಪಿಗೆ ಧೈರ್ಯವನ್ನು ನೀಡಲಿ, ಪ್ರಪಂಚದ ಪರಿವರ್ತನೆಯ ಗುರಿಯ ಮಹತ್ತರವಾದ ಚಳುವಳಿಯ ಮುಂದಾಳತ್ವವನ್ನು ವಹಿಸಲು ಮತ್ತೊಮ್ಮೆ ಕರೆಯಲ್ಪಟ್ಟ ಯುವ ಜನರಿಗೆ ಇನ್ನೂ ಹೆಚ್ಚು ಧೈರ್ಯವನ್ನು ನೀಡಲಿ .

ಹಾಗಾದರೆ ಇದು ನಮ್ಮ ಅತಿ ಪ್ರಕಾಶಮಾನವಾದ ಭರವಸೆ. ಈ ರಿದ್ವಾನ್ ಮತ್ತು ಮುಂದಿನ ದ್ವಿಶತಮಾನದ ಮಧ್ಯ ಇರುವ ಆರು ಆವೃತಗಳು – ಖಂಡಿತವಾಗಿ , ಈ ಪ್ರಸ್ತುತ ಯೋಜನೆಯ ಉಳಿದ ಮೂರು ವರ್ಷಗಳು - ಬಾಬ್‌ರವರ ಶಿಷ್ಯರನ್ನು ದೈವಿಕ ಬೆಳಕಿನ ಸ್ಫೂರ್ತಿಯ ಪ್ರಸರಣಕ್ಕೆ ಪ್ರೇರೇಪಿಸಿದ ಅದೇ ಎಲ್ಲವನ್ನು ಒಳಗೊಂಡ, ಎಲ್ಲವನ್ನೂ ಮೀರಿಸಿದ ಪ್ರೀತಿಯು ಮಹಾನ್ ಕಾರ್ಯಗಳಿಗೆ ನಿಮಗೆ ಸ್ಫೂರ್ತಿ ನೀಡಲಿ. ಸ್ವರ್ಗೀಯ ಸಹಾಯವನ್ನು ಪಡೆಯುವವರು ನೀವಾಗಲಿ ಎಂಬುದೇ ಪವಿತ್ರ ಹೊಸ್ತಿಲನಲ್ಲಿ ನಮ್ಮ ಪ್ರಾರ್ಥನೆ .

ವಿಶ್ವ ನ್ಯಾಯ ಮಂದಿರ